## ಆನಂದದ ಹುಡುಕಾಟ – ೨೩

# ಶರಣಾಗತಿ

ಮೂಲ ಹಿಂದೀ : **ಸ್ವಾಮಿ ಬ್ರಹ್ಮೇಶಾನಂದ**

ಅನುವಾದ : **ಮಾತಾ ತ್ಯಾಗಮಯೀ**

**ಆ**ಧ್ಯಾತ್ಮಿಕ ಜೀವನದಲ್ಲಿ ಅತ್ಯಂತ ಪರಿಚಿತ ಶಬ್ದ ಶರಣಾಗತಿ. ಶ್ರೀಕೃಷ್ಣ ಅರ್ಜುನನಿಗೆ ಗೀತೆಯ ಅಂತಿಮ ಭಾಗದಲ್ಲಿ ಸರ್ವ ಧರ್ಮಗಳನ್ನು ತ್ಯಜಿಸಿ ಶರಣಾಗುವಂತೆ ಆದೇಶಿಸಿರುವನು. ಶರಣಾಗತಿಯ ಸಾಧನೆ ಮತ್ತು ಸಿದ್ಧಿ ಹೇಳುವಷ್ಟು ಸುಲಭವಲ್ಲ.

ಶರಣಾಗತಿಯ ಸ್ವರೂಪವನ್ನು ಕೂಲಂಕಷವಾಗಿ ಅರ್ಥ ಮಾಡಿಕೊಳ್ಳಲು ಅದನ್ನು ನಾವು ಮೂರು ದೃಷ್ಟಿಗಳಿಂದ ಆಲೋಚಿಸುವುದು ಉಚಿತ. ೧) ಜೀವನಗುರಿಯಾಗಿ ಶರಣಾಗತಿ ೨) ಸಾಧನೆಯಾಗಿ ಶರಣಾಗತಿ ಮತ್ತು ೩) ಶರಣಾಗತಿ: ಒಂದು ಮನಸಿತಿ.



### ೧) ಶರಣಾಗತಿ: ಜೀವನದ ಗುರಿ

ಭಕ್ತಿಶಾಸ್ತ್ರಗಳಲ್ಲಿ ಶರಣಾಗತಿಯನ್ನು ಜೀವನದ ಗುರಿ ಎಂದು ಹೇಳಲಾಗಿದೆ. ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ನಾಲ್ಕು ಪುರುಷಾರ್ಥಗಳ ಹೊರತಾಗಿ ಶರಣಾಗತಿಯನ್ನು ಪಂಚಮ ಪುರುಷಾರ್ಥವೆಂದು ಬಗೆದು ಶರಣಾಗತಿಗೆ ಮೋಕ್ಷಕ್ಕಿಂತ ಹೆಚ್ಚಿನ ಸ್ಥಾನವನ್ನು ಕೊಡಲಾಗಿದೆ. ಭಕ್ತ ಮುಕ್ತಿಯನ್ನು ಬಯಸನು. ಅವನು ತನ್ನ ಇಚ್ಛೆಯನ್ನು ಅದು ಮೋಕ್ಷದ ಇಚ್ಛೆಯಾದರೂ ಏನಂತೆ, ಪ್ರಭುವಿನ ಇಚ್ಛೆಯಲ್ಲಿ ಲಯಗೊಳಿಸಬಯಸುತ್ತಾನೆ. ಎಂದರೆ ಇಲ್ಲಿ ಶರಣಾಗತಿಯೇ ಸಾಧ್ಯ(ಗುರಿ). ಸಾಧನೆಯ ಪರಮಫಲವಾಗಿ ಲಭಿಸುವ ಸ್ಥಿತಿ ಇದು.

ಹಡಗಿನ ಕಾಗೆಗೆ ಸಮುದ್ರದ ನಡುವೆ ಹಡಗೇ ನಿಜವಾದ ಆಶ್ರಯ ಎಂಬುದನ್ನು ಪ್ರಯೋಗಪೂರ್ವಕವಾಗಿ, ಅನುಭವ ಪೂರ್ವಕವಾಗಿ ಅರಿತ ಮನಸ್ಥಿತಿಯಿದು. ಎಲ್ಲ ಮಹಾಪುರುಷರು ಈ ಮನಸ್ಥಿತಿಯನ್ನು ಸಾರಿ ಹೇಳಿದ್ದಾರೆ, ಬದುಕಿ ತೋರಿದ್ದಾರೆ.

ಓರ್ವ ಸೂಫಿ ಯಜಮಾನ ಮತ್ತು ಅವನ ಗುಲಾಮನ ನಡುವಿನ ಸಂಭಾಷಣೆಯಲ್ಲಿ ಶರಣಾಗತಿಯ ಅರ್ಥವನ್ನು ನಾವು ಮನಗಾಣಬಹುದು.

ಸೂಫಿ ಯಜಮಾನ: (ಹೊಸ ಗುಲಾಮನಿಗೆ) ನಿನ್ನ ಹೆಸರೇನು?

ಗುಲಾಮ: ಸ್ವಾಮಿ, ನೀವು ನನ್ನನ್ನು ಯಾವ ಹೆಸರಿನಿಂದ ಕರೆಯುತ್ತೀರೋ ಅದೇ ನನ್ನ ಹೆಸರು.

ಯಜಮಾನ: ಯಾವ ಯಾವ ಕೆಲಸಗಳನ್ನು ಮಾಡಬಲ್ಲೆ?

ಗುಲಾಮ: ನೀವು ಯಾವ ಕೆಲಸವನ್ನು ಹೇಳಿದರೂ ಅದನ್ನು ಮಾಡುತ್ತೇನೆ.

ಯಜಮಾನ: ನೀನು ಏನು ತಿನ್ನುತ್ತೀಯಾ?

ಗುಲಾಮ: ನೀವು ನನಗೆ ಏನು ಕೊಡುತ್ತೀರೋ ಅದನ್ನು ತಿನ್ನುತ್ತೇನೆ.

ಯಜಮಾನ: ನಿನ್ನ ಇಚ್ಛೆ ಏನು?

ಗುಲಾಮ: ದಾಸನಿಗೆ ಎಂದಾದರೂ ತನ್ನ ಇಚ್ಛೆಯೆಂಬುದು ಇರಲು ಸಾಧ್ಯವೆ?

ಅಥವಾ ಒಬ್ಬ ಯುದ್ಧ ವಿಜಯಿ ರಾಜನ ಮುಂದೆ ನಿಂತ ಸೋತ ರಾಜನ ಮನಸ್ಥಿತಿಯಂತೆ (ಎಂದರೆ ಅವನ ಇಡೀ ಭವಿಷ್ಯವು ರಾಜನನ್ನೇ ಅವಲಂಬಿಸಿರುವಂತೆ) ಭಕ್ತನ, ಶರಣಾಗತ ಭಕ್ತನ ಮನಸ್ಥಿತಿ ಇರುತ್ತದೆ. ರಾಜ ಅವನಿಗೆ ಮರಣದಂಡನೆಯ ಶಿಕ್ಷೆ ನೀಡಿದರೂ, ಆಜೀವನ ಕಾರಾಗೃಹವಾಸದ ಶಿಕ್ಷೆ ಕೊಟ್ಟರೂ, ಅಥವಾ ಅವನನ್ನು ಕ್ಷಮಿಸಿ ಗೌರವದಿಂದ ಕಳುಹಿಸಿಕೊಟ್ಟರೂ — ಅವನು ಎಲ್ಲದಕ್ಕೂ ಸಿದ್ಧನಾಗಿರಬೇಕಾಗುತ್ತದೆ. ಸ್ವಾಮಿ ಶಿವಾನಂದರು ತಮ್ಮ ಒಂದು ಭಾಷಣದಲ್ಲಿ ಇದನ್ನು ಮನೋಜ್ಞವಾಗಿ ಹೇಳಿದ್ದಾರೆ:

“ಗುರಿಯನ್ನು ಭೇದಿಸುವ ಬಾಣದಂತಿರಿ. ಶತ್ರುವನ್ನು ಕೊಚ್ಚಿ ಹಾಕುವ ತೀಕ್ಷ್ಣ ಖಡ್ಗದಂತಿರಿ. ಕಲ್ಲನ್ನು ಪುಡಿ ಪುಡಿ ಮಾಡಿ ಹಾಕುವ ಕಬ್ಬಿಣದ ಕೊಡಲಿಯಂತಿರಿ. ಬಾಣ ಗುರಿತಪ್ಪಿದರೆ ಮರುಗುವುದಿಲ್ಲ, ಖಡ್ಗ ಕೈಯಿಂದ ಜಾರಿಬಿದ್ದರೆ ಹಲುಬುವುದಿಲ್ಲ. ಕೊಡಲಿ ತನ್ನ ಗುರಿತಪ್ಪಿದರೆ ರೋದಿಸುವುದಿಲ್ಲ. ಅದೇ ರೀತಿ ಭಗವಂತನ ಕರಗಳಲ್ಲಿರುವ ಯಂತ್ರದಂತಿರಿ. ಭಗವಂತನ ಯಂತ್ರವಾಗುವುದರಲ್ಲಿ, ಅವನಿಂದ ಉಪಯೋಗಿಸಲ್ಪಡುವು

ದರಲ್ಲಿ ಒಂದು ಆನಂದವಿದೆ. ಕೊನೆಗೆ ಕೆಲಸ ಮುಕ್ತಾಯವಾಗಿ ಮೂಲೆಗೆಸೆಯುವುದರಲ್ಲೂ ಅಷ್ಟೇ ಆನಂದವಿದೆ.

### ೨) ಶರಣಾಗತಿ: ಒಂದು ಸಾಧನೆ

ಮೇಲೆ ಹೇಳಿದ ಪರಿಪೂರ್ಣ ಶರಣಾಗತಿ ಒಂದೆರಡು ದಿನಗಳಲ್ಲಿ ಸುಲಭವಾಗಿ ಸಿದ್ಧಿಸುವಂಥದಲ್ಲ. ಅದಕ್ಕಾಗಿ ದೀರ್ಘ ಕಾಲದ ಸಾಧನೆಯ ಅಗತ್ಯವಿದೆ. ಸ್ವಪ್ರಯತ್ನ ಮತ್ತು ಶರಣಾಗತಿ ಒಟ್ಟೊಟ್ಟಿಗೆ ನಡೆಯಬೇಕಾದವುಗಳು. ಶರಣಾಗತಿ ಪ್ರತಿಯೊಬ್ಬ ಸಾಧಕನ ಸಾಧನೆಯ ಅಭಿನ್ನ ಅಂಗ. ಭಕ್ತಿಯೋಗದಲ್ಲಿ ಶರಣಾಗತಿಗೆ ಪ್ರಧಾನ ಸ್ಥಾನವಿದ್ದೇ ಇದೆ. ಕರ್ಮಯೋಗದಲ್ಲೂ ಕರ್ಮ ಫಲವನ್ನು ಭಗವಂತನಿಗೆ ಅರ್ಪಿಸುವುದರ ಮೂಲಕ ಶರಣಾಗತಿಯನ್ನು ಸಾಧಿಸುವುದು ಒಂದು ಅನಿವಾರ್ಯ ಅಂಗ. ಧ್ಯಾನ ಯೋಗದಲ್ಲಿ ಶರಣಾಗತಿಯು 'ಈಶ್ವರಪ್ರಣಿಧಾನ' ಎಂದು ಸೇರ್ಪಡೆಯಾಗಿದೆ. ಪತಂಜಲಿ ಮಹರ್ಷಿ ಯೋಗದ ಪೂರ್ವ ತಯಾರಿಯಾಗಿ 'ಕ್ರಿಯಾಯೋಗ'ವನ್ನು ಹೇಳುತ್ತಾನೆ. ಕ್ರಿಯಾ ಯೋಗದ ಅಂಗಗಳು ಮೂರು — ತಪಸ್ಸು, ಸ್ವಾಧ್ಯಾಯ ಮತ್ತು ಈಶ್ವರ ಪ್ರಣಿಧಾನ. ಮಾತ್ರವಲ್ಲ ಈಶ್ವರ ಪ್ರಣಿಧಾನವು 'ನಿಯಮ'ಗಳಲ್ಲಿ ಒಂದು. ಈಶ್ವರ ಪ್ರಣಿಧಾನದಿಂದ ಶೀಘ್ರವಾಗಿ ಸಮಾಧಿಲಾಭ ಉಂಟಾಗುತ್ತದೆ ಎಂಬುದು ಯೋಗಶಾಸ್ತ್ರದಲ್ಲಿ ಸ್ವೀಕೃತ ತತ್ತ್ವ. ಪತಂಜಲಿ ಯೋಗಸೂತ್ರವನ್ನು ವ್ಯಾಖ್ಯಾನಿಸಿದ ಭಾಷ್ಯಕಾರರಾದ ವ್ಯಾಸದೇವರು ಈಶ್ವರ ಪ್ರಣಿಧಾನಕ್ಕೆ ಮೂರು ಅರ್ಥಗಳನ್ನು ಹೇಳಿದ್ದಾರೆ: ೧) ಪರಮಗುರುವಾದ ಭಗವಂತನಲ್ಲಿ ಸರ್ವಸಮರ್ಪಣ ಅಥವಾ ಕರ್ಮಫಲ ಸಂನ್ಯಾಸ. ೨) ತನ್ನೊಳಗೆ ಈಶ್ವರ ಸಮಕ್ಷತೆಯನ್ನು ಕಾಣುತ್ತ ಅವನಲ್ಲಿ ಆತ್ಮಸಮರ್ಪಣೆಯೊಂದಿಗೆ ನಿಶ್ಚಿಂತನಾಗಿರುವುದು. ೩) ಪ್ರತಿಯೊಂದು ಕೆಲಸ-ಕಾರ್ಯವು ಭಗವಂತನ ಪ್ರೇರಣೆಯಿಂದ ನಡೆಯುತ್ತಿದೆ ಎಂದು ಹಗಲು ರಾತ್ರಿ ಭಾವಿಸುತ್ತ ಅವನಲ್ಲಿ ಸರ್ವಕರ್ಮ ಸಮರ್ಪಣೆ.

**ಕಾಮತೋಽಕಾಮತೋ ವಾಪಿ ಯತ್ಕರೋಮಿ ಶುಭಾಶುಭಮ್ ।**
**ತತ್ಸರ್ವಂ ತ್ವಯಿ ಸಂನ್ಯಸ್ತಂ ಪ್ರಯುಕ್ತಃ ಕರೋಮ್ಯಹಮ್ ॥**

ಎಂದರೆ, 'ನಾನು ಅರಿತೋ ಅರಿಯದೆಯೋ, ಬಯಸಿಯೊ ಬಯಸದೆಯೋ ಮಾಡುವ ಪ್ರತಿಯೊಂದು ಕಾರ್ಯದ ಸುಖ ಅಥವಾ ದುಃಖಾತ್ಮಕ ಫಲವನ್ನು ನಿನಗೆ ಸಮರ್ಪಿಸುತ್ತೇನೆ.'

ಮೇಲಿನ ಶ್ಲೋಕವನ್ನು ವಿಶ್ಲೇಷಿಸಿದಾಗ ಪ್ರತಿಯೊಂದು ಕರ್ಮದಲ್ಲಿಯೂ ನಾಲ್ಕು ಅಂಗಗಳಿವೆ ಎಂದು ಗೊತ್ತಾಗುತ್ತದೆ — ಇಚ್ಛೆ, ಕರ್ತಾ, ಕರ್ಮ ಮತ್ತು ಫಲ. ನಾವು ಜೀವನದಲ್ಲಿ ಪ್ರತಿಯೊಂದು ಕೆಲಸವನ್ನು ಸ್ವಂತ ಇಚ್ಛೆಯಿಂದ ಅಥವಾ ಇನ್ನೊಬ್ಬರ ನಿರ್ದೇಶನದಿಂದ ಮಾಡುತ್ತೇವೆ. ಪ್ರತಿಯೊಂದು ಕರ್ಮಕ್ಕೆ ಒಂದು ಕಾರಣವಿದೆ. ಎರಡನೆಯದಾಗಿ ಕರ್ಮ ಮಾಡುವವನಲ್ಲಿ ನಾನು ಎಂಬ ಕರ್ತೃತ್ವ ಭಾವನೆ ಇದೆ. ಮೂರನೆಯದು ಕರ್ಮ. ನಾಲ್ಕನೆಯದಾಗಿ ಕರ್ಮದ ಫಲ. ಕರ್ಮದ ಕಾರಣ, ಇಚ್ಛೆ ಮತ್ತು ಕರ್ತೃತ್ವ ಇವುಗಳ ಅರ್ಥದಲ್ಲಿ ಸ್ವಲ್ಪ ವ್ಯತ್ಯಾಸ ವಿದ್ದರೂ ಹೆಚ್ಚಿನ ವ್ಯತ್ಯಾಸವಿಲ್ಲ. ಶರಣಾಗತಿ ಎಂದು ಹೇಳಿದಾಗ ತನ್ನ ಇಚ್ಛೆಯನ್ನು ತ್ಯಜಿಸುವುದು, ತನ್ನ ಕರ್ತೃತ್ವಬುದ್ಧಿಯನ್ನು ತ್ಯಜಿಸುವುದು.

'ಎಲ್ಲವೂ ನಿನ್ನಿಚ್ಛೆಯಂತೆ ನಡೆದಿರಲು
ನೀನೆ ಭವಸಾಗರವ ದಾಟಿಸುವ ಹಡಗು
ನಿನ್ನ ಇಚ್ಛೆಯ ನೀನು ಪೂರೈಸುತಿರಲು
ತಮ್ಮ ಗೈಮೆಯಿದೆಂದು ತಿಳಿವರೀ ಜನರು.
ನೀನು ಚಾಲಕಶಕ್ತಿ ನಾನೊಂದು ಯಂತ್ರ
ನಾನೊಂದು ಬರಿಯ ಮನೆ ನೀನದರ ರಥಿಕ
ನೀನಡೆಸೆ ನಾನಡೆವೆ ನಿನ್ನದೀ ಲೋಕ'

ಎಂಬ ಭಜನೆಯನ್ನು ಶ್ರೀರಾಮಕೃಷ್ಣರು ಹಾಡುತ್ತಿದ್ದರು. ಅವನ ಯಂತ್ರವಾಗುವುದು ಶರಣಾಗತಿಯ ಚರಮಸ್ಥಿತಿ. ಶ್ರೀರಾಮಕೃಷ್ಣರಿಗೆ 'ನಾನಲ್ಲ, ನೀನು' 'ನಾನಲ್ಲ, ನೀನು' 'ಅವನ ಇಚ್ಛೆಯಂತಾಗಲಿ' ಎಂಬುದು ಚೆನ್ನಾಗಿ ಗೊತ್ತಿತ್ತು. ಸ್ವಾಮಿ ಬ್ರಹ್ಮಾನಂದರು ಯಾವುದೇ ಊರಿಗೆ ಹೋಗಬೇಕಾದರೆ, ಶಿಷ್ಯರನ್ನು ಸ್ವೀಕರಿಸಬೇಕಾದರೆ ಪ್ರತಿಯೊಂದನ್ನು ಪ್ರಭುವಿನ ಇಚ್ಛೆಯಂತೆ ಮಾಡುತ್ತಿದ್ದರು. ಇದರ ಅರ್ಥ ತನ್ನ ಇಚ್ಛೆಯನ್ನು ಬಿಡುವುದು, ಪ್ರಭುವಿನ ಇಚ್ಛೆಗೆ ಅನುವರ್ತಿಯಾಗಿ ಕರ್ಮ ಮಾಡುವುದು, ತನ್ಮೂಲಕ ಅಹಂಕಾರ ನಾಶವನ್ನು ಸಾಧಿಸುವುದು ಶರಣಾಗತಿಯ ಗುರಿ. ಬಹುಶಃ ಸರ್ವಕರ್ಮತ್ಯಾಗ ಮತ್ತು ಕರ್ಮಫಲ ತ್ಯಾಗ ಸುಲಭವೇನೋ, ಆದರೆ ಅಹಂಕಾರ ನಾಶ ಎಂಬ ಶರಣಾಗತಿ ಸಾಧನೆ ಸುಲಭವಲ್ಲ.

ಶರಣಾಗತಿ ಸಾಧನೆಯನ್ನು ನಾಲ್ಕು ಹಂತಗಳಲ್ಲಿ ಅಭ್ಯಾಸ ಮಾಡಬಹುದು:

೧. ತನ್ನ ಇಚ್ಛೆಯ ತ್ಯಾಗ
೨. ಕರ್ತೃತ್ವ ತ್ಯಾಗ
೩. ಕರ್ಮತ್ಯಾಗ
೪. ಕರ್ಮಫಲ ತ್ಯಾಗ

**೧. ತನ್ನ ಇಚ್ಛೆಯ ತ್ಯಾಗ :** ದಿನದಿನದ ಜೀವನದಲ್ಲಿ ನಾವು ಅನೇಕ ಕಡೆಗಳಲ್ಲಿ ಸ್ವಂತ ಇಚ್ಛೆಯನ್ನು ಬಿಟ್ಟುಕೊಡಬೇಕಾಗುತ್ತದೆ. ಮಗ ತಂದೆಗಾಗಿ, ಪತ್ನಿ ಪತಿಗಾಗಿ, ನೌಕರ ಯಜಮಾನನಿಗಾಗಿ ತನ್ನ ಇಚ್ಛೆಯನ್ನು ಬಿಟ್ಟು ಅವರ ಇಚ್ಛೆಯಂತೆ ಕೆಲಸ ಮಾಡುತ್ತಾರೆ. ಸಾಮಾಜಿಕ ವ್ಯವಸ್ಥೆಯನ್ನು ಕಾಪಾಡಲೆಂದು ಅನೇಕ ನಿಯಮಗಳಿರುತ್ತವೆ. ಆ ನಿಯಮಗಳನ್ನು ಪಾಲಿಸಲು ನಮ್ಮ ಆಶೆ-ಆಸಕ್ತಿ, ಇಚ್ಛೆಯನ್ನು ಮೂಲೆಗೊತ್ತಬೇಕಾಗುತ್ತದೆ. ಆಯಾ ವ್ಯಕ್ತಿಯ ವಯಸ್ಸು, ಸಾಮಾಜಿಕ ಸ್ಥಾನಮಾನಕ್ಕೆ ತಕ್ಕಂತೆ, ಅವನಿಗೆ

ವಿವಿಧ ಕರ್ತವ್ಯಗಳಿವೆ. ಈ ನಿಯಮಗಳನ್ನು ವರ್ಣಾಶ್ರಮ ಧರ್ಮಗಳೆಂದು ಕರೆಯಲಾಗಿದೆ. ಈ ಕೌಟುಂಬಿಕ ಹಾಗೂ ಸಾಮಾಜಿಕ ವಿಧಿ ನಿಷೇಧಗಳನ್ನು ಭಗವಂತನ ಇಚ್ಛೆಯೆಂದು ಬಗೆದು ಪಾಲಿಸುವುದರಿಂದ ದೈನಂದಿನ ಕೆಲಸಕಾರ್ಯಗಳು ಶರಣಾಗತಿ ಸಾಧನೆಯ ರೂಪ ತಾಳುತ್ತವೆ.

ಈ ಸಾಮಾಜಿಕ ನಿಯಮಗಳಿಗೆ ಹೊರತಾಗಿ ಕೆಲವು ಸಾರ್ವತ್ರಿಕ ಸಿದ್ಧಾಂತಗಳಿವೆ. ಅವನ್ನು ಪಾಲಿಸುವುದು ಶರಣಾಗತಿಯ ಸಾಧನೆಯ ಒಂದು ಅಂಗ. ಗುರುವಿನ ಆದೇಶವನ್ನು ಭಗವಂತನ ಆದೇಶವೆಂದು ಬಗೆದು ಪಾಲಿಸುವುದೂ ಶ್ರೇಷ್ಠವಾದುದು. ಸಂಘದ ಮುಖ್ಯಸ್ಥರ ಆದೇಶವನ್ನು ಭಗವಂತನ ಆದೇಶವೆಂದು ಬಗೆಯಬೇಕು. ಧರ್ಮಸಂಸ್ಥೆಗಳಲ್ಲಿ, ಸಂನ್ಯಾಸಿ ಸಂಸ್ಥೆಗಳಲ್ಲಿ ಈ ಬಗೆಯ ವಿಧೇಯತೆಯು ಶರಣಾಗತಿ ಸಾಧನೆಯ ಒಂದು ಮುಖ್ಯ ಅಂಗ.

ಭಗವಂತನ ಆದೇಶವನ್ನು ನೇರವಾಗಿ ಪಡೆಯುವುದು ಒಂದು ಅಪರೂಪದ ಸೌಭಾಗ್ಯ. ಅದು ಕೆಲವೆ ಪರಿಶುದ್ಧ ಹೃದಯದ ಸಾಧಕರಿಗೆ ಸಾಧ್ಯ. ಕೆಲವೇ ಕೆಲವು ಉಚ್ಚಕೋಟಿಯ ಸಾಧಕರು ಅವನ ಆದೇಶವಿಲ್ಲದೆ ಒಂದು ಹೆಜ್ಜೆಯನ್ನು ಮುಂದೆ ಇಡುವುದಿಲ್ಲ. ಶ್ರೀ ರಾಮಕೃಷ್ಣರ ಸಂನ್ಯಾಸಿ ಶಿಷ್ಯರಾದ ಸ್ವಾಮಿ ಅದ್ಭುತಾನಂದರು ಯಾವುದೇ ಕಾರ್ಯವನ್ನು ಮಾಡಬೇಕಾದರೂ ಭಗವಂತನನ್ನು ಪ್ರಾರ್ಥಿಸಿ ಅವನ ಆದೇಶ ಲಭಿಸುವವರೆಗೆ ಕಾಯುತ್ತಿದ್ದರು. ಕೆಲವೊಮ್ಮೆ ಅವರು ಒಂದು ವರ್ಷದವರೆಗೆ ಕಾಯಬೇಕಾಗುತ್ತಿತ್ತು. ಅವರಿಗೆ ಭಗವಂತನ ಆದೇಶವು ಸ್ವಪ್ನದಲ್ಲಿ ಅಥವಾ ದರ್ಶನದಲ್ಲಿ ಸಿಗುತ್ತಿತ್ತು. ಆರಂಭದ ಸಾಧಕ ಇದನ್ನು ಮಾಡಲು ಸಾಧ್ಯವಿಲ್ಲ. ಅವನು ಯಾವುದೆ ಕಾರ್ಯಕ್ಕೆ ಮೊದಲು ಅಥವಾ ಸಂಕಲ್ಪಕ್ಕೆ ಮೊದಲು ಭಗವಂತನ ಕೃಪೆಗಾಗಿ, ಅವನ ಸಹಾಯಕ್ಕಾಗಿ ಪ್ರಾರ್ಥಿಸಬೇಕು. ತನ್ನ ಇಚ್ಛೆ ಈಡೇರುವುದು ಬೇಡ, ಅವನ ಇಚ್ಛೆ ಈಡೇರಲಿ ಎಂದು ಪ್ರಾರ್ಥಿಸಬೇಕು.



ಶ್ರೀರಾಮಕೃಷ್ಣರ ಗೃಹಸ್ಥ ಭಕ್ತ ಗಿರೀಶ ಚಂದ್ರ ಘೋಷನ ಜೀವನ ಸ್ವ ಇಚ್ಛೆಯ ತ್ಯಾಗಕ್ಕೆ ಪರಿಪೂರ್ಣ ಉದಾಹರಣೆ. ಅವನು ಶ್ರೀರಾಮಕೃಷ್ಣರಿಗೆ ತನ್ನ ವಕಾಲತ್ತನ್ನು ವಹಿಸಿದ ಮೇಲೆ ಒಂದು ದಿನ ಮಾತಿನ ನಡುವೆ 'ನಾನು ಇಂತಹ ಕೆಲಸವನ್ನು ಮಾಡ ಬೇಕು' ಎಂದನು. ಶ್ರೀರಾಮಕೃಷ್ಣರು ಅವನನ್ನು ತಡೆಯುತ್ತ 'ನೀನು ನಿನ್ನ ವಕಾಲತ್ತನ್ನು ನನಗೆ ವಹಿಸಿದ್ದರಿಂದ 'ನಾನು' ಇಂತಹ ಕೆಲಸವನ್ನು ಮಾಡುತ್ತೇನೆ ಎಂದು ಹೇಳು'' ಎಂದು ತಿಳಿಯಪಡಿಸಿದರು. ಅಂದಿನಿಂದ ಗಿರೀಶ ದಿನವೂ ತನ್ನೆಲ್ಲ ಕೆಲಸಕ್ಕೆ ಮೊದಲು ಭಗವಂತನನ್ನು ಪ್ರಾರ್ಥಿಸಿ ಅವನಿಂದ ಆದೇಶವನ್ನು ಪಡೆಯ ಬಯಸುತ್ತ, ತನ್ನ ಇಚ್ಛೆಯನ್ನು ತ್ಯಾಗ ಮಾಡುವುದನ್ನು ಕಲಿತನು. ಹೀಗೆ ಮಾಡುತ್ತ ಅವನು ತನಗೆ ಎಷ್ಟೇ ದಾಹವಾಗಿದ್ದರೂ ಭಗವಂತನ ಆದೇಶವಿಲ್ಲದೆ ತಾನು ಒಂದು ಲೋಟ ನೀರನ್ನೂ ಕುಡಿಯಲಾಗದು ಎನ್ನುವ ಸ್ಥಿತಿಯನ್ನು ತಲುಪಿದನು.

**೨) ಕರ್ತೃತ್ವ ತ್ಯಾಗ:** ತನ್ನ ಕರ್ತೃತ್ವಬುದ್ಧಿಯನ್ನು ಹಲವು ಬಗೆಯಲ್ಲಿ ತ್ಯಜಿಸಬಹುದು. ೧) **ಈಶ್ವರಃ ಸರ್ವಭೂತಾನಾಂ ಹೃದ್ದೇಶೇಽರ್ಜುನ ತಿಷ್ಠತಿ । ಭ್ರಾಮಯನ್ ಸರ್ವಭೂತಾನಾಂ ಯಂತ್ರಾರೂಢಾನಿ ಮಾಯಯಾ ॥** 'ಭಗವಂತ ಎಲ್ಲರ ಹೃದಯದಲ್ಲಿ ವಾಸಿಸುತ್ತ ತನ್ನ ಮಾಯೆಯಿಂದ ಅವರನ್ನು ನಡೆಸುತ್ತಿದ್ದಾನೆ. ಎಲ್ಲಕ್ಕೂ ಮೊದಲು ತನ್ನ ಹೃದಯದಲ್ಲಿ ಭಗವಂತ ವಾಸಿಸುತ್ತಿದ್ದಾನೆ' ಎಂಬ ದೃಢಬುದ್ಧಿಯನ್ನು ತಾಳಬೇಕು. ತನ್ನ ಹೃದಯದಲ್ಲಿ ನೆಲೆಸಿ ಅವನೆ ಎಲ್ಲ ಕೆಲಸಗಳನ್ನು ಮಾಡಿಸುತ್ತಿದ್ದಾನೆ ಎಂಬ ಭಾವನೆಯಿಂದ ಕರ್ಮ ನಿರತನಾಗಬೇಕು. ೨) ಭಗವಂತನ ಶಾಂತ ವಿರಾಟ್ ಇಚ್ಛೆಯಲ್ಲಿ ತನ್ನ ಇಚ್ಛೆಯನ್ನು ಲಯಗೊಳಿಸಬೇಕು. ಎಂದರೆ ನಾನು ಭಗವಂತ, ನಾನು ವೀತರಾಗನು ಎಂದು ಭಾವಿಸುತ್ತ ತಾನು ಮಾಡುವ ಕರ್ಮಗಳೆಲ್ಲ ಭಗವಂತನಿಂದ ನಡೆಯುತ್ತಿವೆ, ಎಂದು ತಿಳಿಯಬೇಕು. ೩) ನಾನು ನಿತ್ಯಶುದ್ಧಬುದ್ಧಮುಕ್ತ ಆತ್ಮ. ನಾನು ಅಕರ್ತಾ, ಅಭೋಕ್ತಾ ಆತ್ಮ ಎಲ್ಲ ಕೆಲಸಕಾರ್ಯಗಳು ಭಗವದ್ಗೀತೆಯ ವಾಣಿಯಂತೆ, 'ಗುಣಾ ಗುಣೇಷು ವರ್ತಂತೇ' — ಮೂರು ಗುಣಗಳಿಂದ ನಡೆಯುತ್ತಿವೆ, ನನ್ನಿಂದ ಅಲ್ಲ ಎಂದು ತಿಳಿದುಕೊಳ್ಳಬೇಕು.

**೩) ಸರ್ವಕರ್ಮತ್ಯಾಗ:** ಕರ್ಮತ್ಯಾಗವು ಅಹಂಕಾರ ತ್ಯಾಗ ಅಥವಾ ಸ್ವ ಇಚ್ಛೆಯ ತ್ಯಾಗಕ್ಕಿಂತ ಸುಲಭವಾದುದು. ಒಂದು ಕೆಲಸಕ್ಕೆ ಮೊದಲು ಮತ್ತು ಕೊನೆಯಲ್ಲಿ ಕರ್ಮವನ್ನು ಮನಸ್ಸಿನಿಂದಲೇ ಭಗವಂತನಿಗೆ ಅರ್ಪಿಸಬೇಕು. ಆರಂಭದಲ್ಲಿ ಪ್ರತಿದಿನ ಬೆಳಗ್ಗೆ ''ನಾನು ದಿನವಿಡೀ ಮಾಡುವ ಎಲ್ಲ ಕರ್ಮಗಳನ್ನು ಭಗವಂತನಿಗೆ ಅರ್ಪಿಸುತ್ತೇನೆ'' ಎಂದು ಸಂಕಲ್ಪ ಮಾಡಬೇಕು. ಮತ್ತು ರಾತ್ರಿ ಮಲಗುವ ಮೊದಲು ನಾನು ದಿನವಿಡೀ ಮಾಡಿದ ಕರ್ಮಗಳನ್ನು ಭಗವಂತನಿಗೆ ಅರ್ಪಿಸಿದ್ದೇನೆ ಎಂದು ಸಂಕಲ್ಪವನ್ನು ಪುನರಾವರ್ತಿಸಬೇಕು. ಅದು ಅಭ್ಯಾಸವಾದ ತರುವಾಯ ಪ್ರತಿಯೊಂದು ಸಣ್ಣ ಸಣ್ಣ ಕೆಲಸದ ಆರಂಭದಲ್ಲಿ ಮತ್ತು ಕೊನೆಯಲ್ಲಿ ಕರ್ಮವನ್ನು ಭಗವಂತನಿಗೆ ಅರ್ಪಿಸಬೇಕು.

ನಾವು ಸರ್ವಕರ್ಮಸಮರ್ಪಣೆಯನ್ನು ಹೃತ್ಪೂರ್ವಕವಾಗಿ, ಪ್ರಾಮಾಣಿಕವಾಗಿ ಮಾಡಿದಷ್ಟು ಅದು ಅಧಿಕ ಪರಿಣಾಮಕಾರಿ

ಯಾಗಿರುತ್ತದೆ. ಇಲ್ಲಿ ಭಗವತ್ ಸ್ಮರಣೆಯಿಲ್ಲದೆ ಕರ್ಮ ಸಮರ್ಪಣೆ ಸಾಧ್ಯವಿಲ್ಲ ಎಂಬುದನ್ನು ನಾವು ನೆನಪಿಡಬೇಕು. ಆದ್ದರಿಂದ ಭಗವತ್ ಸ್ಮರಣೆಯು ಅಧಿಕಾಧಿಕವಾಗಿ ನಡೆದರೆ ಮಾತ್ರ ಸಮರ್ಪಣಭಾವ ನಮ್ಮ ಜೀವನದಲ್ಲಿ ಬರುತ್ತದೆ.

ಅಂತರಂಗದ ಈ ಭಾವನೆಯನ್ನು ಉಳಿಸಿಕೊಳ್ಳುವುದು ಸಾಧಕನ ಪಾಲಿನ ಸಮಸ್ಯೆ. ಧ್ಯಾನಸಾಧನೆಯಾಗಲಿ, ಶರಣಾಗತಿ ಸಾಧನೆಯಾಗಲಿ ಅಥವಾ ಇನ್ನಾವ ಸಾಧನೆಯಾಗಲಿ ಭಾವನೆಯ ಅಭಾವದಿಂದ ಯಾಂತ್ರಿಕವಾಗುತ್ತದೆ. ಶರಣಾಗತಿಯು ಕೇವಲ ಈಶ್ವರಾರ್ಪಣಮಸ್ತು ಅಥವಾ ಅವನ ಇಚ್ಛೆಯಂತಾಗಲಿ ಎಂದು ಬಾಯಿಮಾತಾಗಿ ಉಳಿಯಬಾರದು. ಶರಣಾಗತಿಯು ಭಾವ ರಹಿತವಾಗಿ ಬಾಯಿಮಾತಿನ ವಿಷಯವಾದರೂ ಅದರಿಂದ ಉಪಯೋಗವಿದ್ದೇ ಇದೆ. ಭಕ್ತಿಯಿಂದ ಅರ್ಪಿಸಿದ ಪತ್ರ , ಫಲ, ಪುಷ್ಪ ಮತ್ತು ಕೊನೆಗೆ ಜಲವನ್ನೂ ಅವನು ಸ್ವೀಕರಿಸುತ್ತಾನೆ ಎಂಬ ನಂಬಿಕೆ ಬಂದರೆ ಅವನ ವರ್ತನೆ ಪರಿವರ್ತನೆಯಾಗುತ್ತದೆ. ನಾವು ನಮ್ಮ ಪರಮ ಪ್ರಿಯತಮನಿಗೆ ಶ್ರೇಷ್ಠವಾದ ವಸ್ತುವನ್ನಲ್ಲದೆ ಮತ್ತೇನನ್ನೂ ಕೊಡಲಾರೆವು. ಹಾಗಿರುವಾಗ ಯಾವುದೇ ದುಷ್ಕಾರ್ಯ ಅಥವಾ ದುರ್ವಿಚಾರವನ್ನು ಮಾಡುವುದಾದರೂ ಹೇಗೆ? ಅವನಿಗೆ ಅರ್ಪಿಸುವುದಾದರೂ ಹೇಗೆ?

**೪) ಕರ್ಮಫಲತ್ಯಾಗ:** ಸರ್ವಕರ್ಮತ್ಯಾಗ ಸಾಧ್ಯವಾಗದಿದ್ದರೆ ಭಗವದ್ಗೀತೆ ಹೇಳಿದಂತಹ ಕರ್ಮಫಲತ್ಯಾಗದ ಪ್ರಯತ್ನವನ್ನಾದರೂ ಮಾಡಬೇಕು. ಸ್ವಇಚ್ಛೆಯ ತ್ಯಾಗ ಅಹಂಕಾರ ತ್ಯಾಗವು ಕರ್ತೃತ್ವತ್ಯಾಗಕ್ಕೆ ಸಂಬಂಧ ಪಟ್ಟ ವಿಚಾರವಾದರೆ ಕರ್ಮ ಫಲತ್ಯಾಗವು ಭೋಕ್ತೃತ್ವ ತ್ಯಾಗ ಮತ್ತು ಕರ್ಮಯೋಗ ಸಾಧನೆಗೆ ಸಂಬಂಧಿಸಿದ್ದು. ಇದರ ಅರ್ಥ ಉದ್ವಿಗ್ನತೆ ಹಾಗೂ ವಿಕಾರವಿಲ್ಲದೆ ತನ್ನ ಹಿಂದಿನ ಕರ್ಮಗಳ ಶುಭಾಶುಭ, ಪ್ರಿಯಾಪ್ರಿಯ ಫಲಗಳನ್ನು, ಕರ್ಮಪ್ರತಿಕ್ರಿಯೆಗಳನ್ನೂ ಸ್ವೀಕರಿಸುವುದು. ಸಾಮಾನ್ಯ ಜನ ಪುಣ್ಯಫಲವನ್ನು ತತ್ಫಲವಾಗಿ ಲಭಿಸುವ ಸುಖವನ್ನು ಬಯಸುತ್ತಾರೆ. ಪಾಪಫಲವನ್ನು ಬಯಸುವುದಿಲ್ಲ.

**ಪುಣ್ಯಸ್ಯ ಫಲಮಿಚ್ಛಂತಿ ಪುಣ್ಯಂ ನೇಚ್ಛಂತಿ ಮಾನವಾಃ।**
**ನ ಪಾಪಫಲಮಿಚ್ಛಂತಿ ಪಾಪಂ ಕುರ್ವಂತಿ ಯತ್ನತಃ ॥**

ಕರ್ಮಫಲತ್ಯಾಗದ ಅರ್ಥ ಪುಣ್ಯಕರ್ಮಗಳನ್ನು, ಸತ್ಕರ್ಮಗಳನ್ನು ಮಾಡುತ್ತ ಅವುಗಳ ಫಲದ ಅಪೇಕ್ಷೆಯನ್ನು ಇಟ್ಟುಕೊಳ್ಳದಿರುವುದು. ಸಾಧಕನು ಭಗವತ್ ಸ್ಮರಣೆಯೊಂದಿಗೆ ಪ್ರತಿಯೊಂದು ಕರ್ಮವನ್ನು, ಕರ್ಮಫಲವನ್ನು ಅವನಿಗೆ ಅರ್ಪಿಸಬೇಕು. ಯಾಗ ಯಜ್ಞಗಳಲ್ಲಿ ಯಜ್ಞಫಲ ತ್ಯಾಗದ ಸಂಕೇತವಾಗಿ ಒಂದು ಹಣ್ಣನ್ನು ಅಗ್ನಿಗೆ ಅರ್ಪಿಸುತ್ತಾರೆ. ಇದನ್ನು ನಾವು ಪ್ರತಿಯೊಂದು ಕೆಲಸವಾದ ತರುವಾಯ ಮಾನಸಿಕವಾಗಿ ಮಾಡಬಹುದು. ಪ್ರತಿಯೊಂದು ಕಾರ್ಯ ಮುಕ್ತಾಯವಾದಾಗ ಈ ಕರ್ಮಫಲವು ನನ್ನನ್ನು ಯೋಗ ಅಥವಾ ನಿವೃತ್ತಿಗೆ ಕರೆದುಕೊಂಡು ಹೋಗಲಿ, ಸಂಸಾರಬಂಧನದಿಂದ ಪಾರುಗಾಣಿಸಲಿ — ಎಂದು ಪ್ರಾರ್ಥಿಸುತ್ತ ಕರ್ಮ ಫಲವನ್ನು ಭಗವಂತನಿಗೆ ಅರ್ಪಿಸಬೇಕು. ಗಿರೀಶ ಚಂದ್ರ ಘೋಷ್ ಭೋಕ್ತೃತ್ವ ತ್ಯಾಗಕ್ಕೆ, ಕರ್ಮ ಫಲತ್ಯಾಗಕ್ಕೆ ದೊಡ್ಡ ಉದಾಹರಣೆ. ಶ್ರೀರಾಮಕೃಷ್ಣರ ಮಹಾಸಮಾಧಿಯ ಬಳಿಕ ಅವನ ಮಗ ತೀರಿಹೋದನು, ಪತ್ನಿ ತೀರಿಹೋದಳು. ಪೂರ್ವ ಕರ್ಮಫಲವಾಗಿ ಅನೇಕ ಕಷ್ಟಗಳನ್ನೆದುರಿಸಬೇಕಾಯಿತು. ಅವನು ಪ್ರತಿಯೊಂದನ್ನೂ ಭಗವಂತನ ಇಚ್ಛೆ ಎಂದು ಸ್ವೀಕರಿಸಿದನು.

**ಶರಣಾಗತಿ ಮತ್ತು ಸ್ವಪ್ರಯತ್ನ:** ಪ್ರತಿಯೊಂದು ಸಾಧನ ಮಾರ್ಗದಲ್ಲಿ ಕೆಲವು ಅಪಾಯಗಳಿವೆ. ಶರಣಾಗತಿ ಸಾಧನೆಯಲ್ಲಿ ವ್ಯಕ್ತಿ ನಿಷ್ಕ್ರಿಯನಾಗುವ, ಅಕರ್ಮಣ್ಯನಾಗುವ ದೊಡ್ಡ ಅಪಾಯವಿದೆ. ನನ್ನ ಇಚ್ಛೆ, ಸಂಕಲ್ಪ ಮತ್ತು ಎಲ್ಲ ಕರ್ಮಗಳನ್ನು ಭಗವಂತನಿಗೆ ಅರ್ಪಿಸಿದ್ದೇನೆ ಎಂದು ಹೇಳಿ ವ್ಯಕ್ತಿ ನಿಷ್ಕ್ರಿಯನಾಗುತ್ತಾನೆ, ತಮೋಗುಣಿಯಾಗುತ್ತಾನೆ. ನಿಜವಾದ ಶರಣಾಗತಿಯು ಸತತ ಪ್ರಯತ್ನ ಮತ್ತು ನಿರಂತರ ಕರ್ಮಕ್ಷಮತೆಯಿಂದ ಲಭಿಸುವಂಥದ್ದು. ಅದು ಸತ್ವಗುಣಾಧಿಕ್ಯದ ಸ್ಥಿತಿ. ಶರಣಾಗತಿಯೊಂದಿಗೆ ಸ್ವಪ್ರಯತ್ನವನ್ನು ಮುಂದುವರಿಸುವುದು ಅಷ್ಟೇ ಮುಖ್ಯ. ಶರಣಾಗತಿಯ ಹೆಸರಿನಲ್ಲಿ ಆಲಸ್ಯ, ಪ್ರಮಾದ ಅಥವಾ ಮನಸ್ಸಿನ ಮೋಸಕ್ಕೆ ಬಲಿ ಹೋಗಬಾರದು. ಮತ್ತು ಭಗವತ್ ವಿಸ್ಮರಣೆಯೇ ಅಶರಣಾಗತಿಗೆ ಕಾರಣ. ಭಗವತ್ ವಿಸ್ಮರಣೆಯಿಂದ ಕೂಡಿದ ಕಾರ್ಯವು ಅಹಂಕಾರಜನ್ಯವಾದುದು, ಬಂಧನಕ್ಕೆ ಕಾರಣವಾಗುತ್ತದೆ. ಸಾಧಕ ಏಕನಿಷ್ಠ ಹಾಗೂ ಪ್ರಾಮಾಣಿಕನಾದಲ್ಲಿ ಮಾತ್ರ ಈ ಅಪಾಯಗಳಿಂದ ಪಾರಾಗಿ ಸಿದ್ಧಿಯನ್ನು ಪಡೆಯುತ್ತಾನೆ.

## ೩. ಶರಣಾಗತಿ: ಒಂದು ಮನಸ್ಥಿತಿ

ಶರಣಾಗತಿ ಭಾವವನ್ನು ಒತ್ತಡರಹಿತ ಆರೋಗ್ಯಕರ ಮನಸ್ಥಿತಿ ಎಂದು ಹೇಳಬಹುದು. ಅಹಂಪ್ರೇರಿತ ಸಂಕಲ್ಪವು, ತೀವ್ರ ಪ್ರತಿಫಲಾಪೇಕ್ಷೆಯು ಮಾನಸಿಕ ಒತ್ತಡ ಮತ್ತು ಅಶಾಂತಿಗೆ ಕಾರಣ. ಭಗವಂತನ ಇಚ್ಛೆಯಿಂದ ಏನು ಆಗಬೇಕೋ ಆಗುತ್ತದೆ. ಅವನು ಮಾಡಿಸಿದಂತೆ ಮಾಡುತ್ತೇನೆ. ಈ ಭಾವ ಅಹಂಕಾರ ಮತ್ತು ಭವಿಷ್ಯದ ಚಿಂತೆಯಿಂದ ಪಾರುಗಾಣಿಸುತ್ತದೆ. ಮನೋವಿಜ್ಞಾನದ ಭಾಷೆಯಲ್ಲಿ 'ವರ್ತಮಾನದಲ್ಲಿ ಬದುಕು'ವ ಕಲೆಯ ಇನ್ನೊಂದು ಹೆಸರು ಶರಣಾಗತಿ. ಪ್ರತಿಯೊಂದು ಸಾಧನ ಮಾರ್ಗದಲ್ಲಿರುವವರಿಗೂ ಶರಣಾಗತಿಯ ಆವಶ್ಯಕತೆಯಿದೆ. ಆಧ್ಯಾತ್ಮಿಕ ಸಾಧನೆಯ ದೀರ್ಘಪಥವು ಅನೇಕ ಏರುಪೇರುಗಳಿಂದ ಎಡರುತೊಡರುಗಳಿಂದ ಕೂಡಿದುದು. ಅವುಗಳನ್ನು ಸಾಧಕ ಅವಿಚಲಚಿತ್ತನಾಗಿ ಸ್ವೀಕರಿಸುವುದನ್ನು ಕಲಿಯದಿದ್ದರೆ ಅವನು ಮಾರ್ಗದಲ್ಲಿ ಸಿಕ್ಕಿಬೀಳುವ